ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 288/2023**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಪ್ರತಾಪ್ | ಚಾಸಾಃ | ಫ್ರಾಸಾಃ |
| ತಂದೆಯ ಹೆಸರು | ಮುನಿಕೃಷ್ಣಪ್ಪ | 2 | 8 |
| ವಯಸ್ಸು | 33 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **08.01.2026.** | |
| ಉದ್ಯೋಗ | ಖಾಸಾಗಿ ಉದ್ಯೋಗಿ | | |
| ವಾಸ ಸ್ಥಳ | ದೇವನಗೊಂದಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಈಗ ನನಗೆ ತೋರಿಸಿದ ನಿಶಾನೆ.ಪಿ. 7 ರ ಮಹಜರ್ ನಲ್ಲಿ ನನ್ನ ಸಹಿ ಇದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 7 (ಬಿ) ಎಂದು ಗುರುತಿಸಲಾಯಿತು. ಸುಮಾರು 3 ವರ್ಷಗಳ ಹಿಂದೆ ಡಿ.ಹೊಸಹಳ್ಳಿ ಕ್ರಾಸ್ ನ ಬಳಿ ನಮ್ಮ ಕಛೇರಿಯಿದ್ದು ಅಲ್ಲಿ ನಮ್ಮ ಚಾಲಕನನ್ನು ಹುಡುಕಿಕೊಂಡು ಹೋಗುತ್ತಿದ್ದಾಗ ಪೋಲೀಸರು ಬಂದು ನಿಶಾನೆ.ಪಿ. 7 ರ ಮಹಜರ್ ಗೆ ಸಹಿ ಪಡೆದರು. ಆಗ ಬೆಳಗ್ಗೆ 11.00 ಗಂಟೆಯಾಗಿತ್ತು. ಯಾರ ಕಾರಣಕ್ಕೆ ಮಹಜರ್ ಮಾಡಿದ್ದರು ಎಂದು ಗೊತ್ತಿಲ್ಲ. ನನ್ನ ಜೊತೆಗೆ ಗಗನ್ ಇದ್ದರು. ನಿಶಾನೆ.ಪಿ. 7 ರ ಒಕ್ಕಣೆ ನನಗೆ ಗೊತ್ತಿಲ್ಲ. ಪಿರ್ಯಾದಿ ಗೊತ್ತಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 26.03.2023 ರಂದು ಪೋಲೀಸರು ನನ್ನ ಮತ್ತು ಗಗನ್ ರವರ ಸಮಕ್ಷಮ ನಮಗೆ ನೋಟೀಸ್ ನೀಡಿ, ಪಿರ್ಯಾದಿಯವರು 4 ಜನರು ದೊಣ್ಣೆ ಮಚ್ಚು, ಮಾರಾಕಾಸ್ತ್ರಗಳನ್ನು ಹಿಡಿದುಕೊಂಡು ದಿನಾಂಕ 25.03.2023 ರ ರಾತ್ರಿ 11.00 ಗಂಟೆಗೆ ಪಾನ್ ಪರಕ್ ವೇರ್ ಹೌಸ ಬಳಿ ಗಲಾಟೆ ಮಾಡಿ 10 ಲಕ್ಷ ಕೊಡಿ ಇಲ್ಲದಿದ್ದರೆ ನಿಮ್ಮನ್ನು ಚಾಕುವಿನಿಂದ ಚುಚ್ಚಿ ಸಾಯಿಸುತ್ತೇವೆ ಎಂದು

ಹೆದರಿಸಿ ಮೆಸ ರಾಮ್, ಭಮರ ಲಾಲ್ ಅಶೋಕ, ಜೀವಾ ರಾಮ್, ಅರ್ಜುನ್, ವಿಜಯ್ ಸಿಂಗ್, ಸುರೇಶ್ ರವರಿಗೆ ದೊಣ್ಣೆಯಿಂದ ಹೊಡೆದು ನಗದು ಹಣವನ್ನು 3 ಲಕ್ಷ ತೆಗೆದುಕೊಂಡು ಉಳಿದ 7 ಲಕ್ಷ ಕೊಡಬೇಕೆಂದು ವೇರ್ ಹೌಸ್ ನಿಂದ ಕೂಡಿಹಾಕಿ ಹೊರಟು ಹೋದ ಬಗ್ಗೆ ಜಾಗ ತೋರಿಸಿದ್ದು ಅಲ್ಲಿ ಪೋಲೀಸರು ನಮ್ಮ ಸಮಕ್ಷಮ ನಿಶಾನೆ.ಪಿ. 7 ರಂತೆ ಮಹಜರ್ ಬರೆದು ಓದಿ ಹೇಳಿದ ನಂತರ ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ : ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.